ಗೊತ್ತಾಗಬೇಕಲ್ಲ. ಆದಕ್ಕಾಗಿ ನಾವು ಬಾಡಿಯನ್ನು ಎಗ್ಸಾಂ ಮಾಡಿಸಿ ಎಂದರೆ ಸಂಬಂಧಿಕರು ಆರ್ಜಿ ಕೊಟ್ಟರೆ ಮಾಡುತ್ತಾರೆ, ಇಲ್ಲದಿದ್ದರೆ ಇಲ್ಲ ಅಂದರೆ ಹೇಗೆ? ಒಪ್ಪಿಕೊಂಡರೆ ಇದೇನು ಪ್ರತಿಷ್ಠೆಯ ಪ್ರಶ್ನೆ ಅಲ್ಲ. ಇದರಿಂದ ಪೊಲೀಸರಿಗೇನು ತೊಂದರೆಯಾಗುತ್ತದೆ? ಅವರ ಪ್ರೆಸ್ಟೀಜ್ ಏನು ಹೋಗುತ್ತದೆ? ಸರ್ಕಾರದ ಪ್ರೆಸ್ಟೀಜ್ ಏನು ಹೋಗುತ್ತದೆ? ನ್ಯಾಯ ಸಿಗುವಾಗ ಪ್ರತಿಕ್ಕೆ ಒಪ್ಪಬಾರದು ? ಆದ್ದರಿಂದ ಪುನಃ ಇದನ್ನು ಪರಿಶೀಲಿಸಬೇಕು, ಬಾಡಿ ಎಗ್ಸಾಂ ಮಾಡುವುದಕ್ಕೆ ಆರ್ಡರ್ ಮಾಡಬೇಕೆಂದು ಮತ್ತೊಮ್ಮೆ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಇನ್ನೊಮ್ಮೆ ಉತ್ತರ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ ಈ ಒಂದು ವಿಚಾರದಲ್ಲಿ ಎಷ್ಟು ಈ ಮನೆಯ ಸಮಯವನ್ನು ತೆಗೆದುಕೊಳ್ಳುತ್ತಿದ್ದಾರೆ. ತನಿಖೆ ಮಾಡುವುದಕ್ಕೆ ನಮ್ಮ ಆಕ್ಷೇಪವಿಲ್ಲ. ಎನ್‌ಕ್ವೈರಿ ನಡೆಯುತ್ತಿದೆ. ಅವರು ಆಗತ್ಯಬಿದ್ದರೆ ಎಕ್ಸ್ಯಾಮ್ ಮಾಡುತ್ತಾರೆ, ಆದರೆ ಇದೆ ರೀತಿಯಲ್ಲಿ ಮಾಡಬೇಕೆಂದು ನಾವು ಒತ್ತಾಯ ಮಾಡುವುದಕ್ಕಾಗುವುದಿಲ್ಲ.

(ಈ ಹಂತದಲ್ಲಿ ಪ್ರತಿ ಪಕ್ಷದ ಎಲ್ಲ ಸದಸ್ಯರು ಎದ್ದುನಿಂತು ಮಾತನಾಡಿದರು)

(ಗೊಂದಲ)

(ಅಧ್ಯಕ್ಷರು ಯಾವುದನ್ನೂ ರೆಕಾರ್ಡ್ ಮಾಡಿಕೊಳ್ಳಬಾರದೆಂದು ಆಜ್ಞಾಪಿಸಿದರು)

(ಈ ನಿಟ್ಟಿನಲ್ಲಿ ಪ್ರತಿಪಕ್ಷದ (ಕಾಂಗ್ರೆಸ್ ಐ) ಸದಸ್ಯರೆಲ್ಲರೂ ಸಭಾತ್ಯಾಗವನ್ನು ಮಾಡಿದರು)

ಹಾನಗಲ್ ಸಬ್‌ಡಿವಿಜನ್‌ನಲ್ಲಿ ೧೬೦ ನೀರಾವರಿ ಪಂಪುಸೆಟ್‌ಗಳಿಗೆ ಮಂಜೂರಾತಿ ದೊರೆತಿದ್ದರೂ ಟ್ರಾನ್ಸ್‌ಫಾರ್ಮರ್ ಇಲ್ಲದ್ದೆರೈತರಿಗೆ ತೊಂದರೆಯಾಗಿರುವುದು.

ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಅಧ್ಯಕ್ಷರೇ ಹಾನಗಲ್ ಸಬ್ ಡಿವಿಜನ್‌ನಲ್ಲಿ ೧೬೦ ನೀರಾವರಿ ಪಂಪ್‌ಸೆಟ್‌ಗಳಿಗೆ ಮಂಜೂರಾತಿ ದೊರೆತಿದ್ದರೂ ಕಳೆದ ಎರಡು ತಿಂಗಳಿಂದ ತಂತಿ ಹಾಗೂ ಟ್ರಾನ್ಸ್‌ಫಾರ್ಮರ್‌ಗಳ ಸರಬರಾಜು ಇಲ್ಲದೆ ರೈತರಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಮಾನ್ಯ ಅಧ್ಯಕ್ಷರೇ, ಹಾನಗಲ್ ತಾಲ್ಲೂಕಿನಲ್ಲಿ ಹಾಲಿ ೭೬ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಒದಗಿಸಲು ಅಂದಾಜು ಮಂಜೂರಾಗಿದೆ. ಇವುಗಳ ಪೈಕಿ ೧೨ರ ಕೆಲಸ ಪ್ರಗತಿಯಲ್ಲಿದೆ ಈ ಅಂದಾಜುಗಳು ೧೧-೩-೧೯೮೪ ರಿಂದ ಈಚೆಗೆ ಮಂಜೂರಾದವುಗಳು.

ಹಾನಗಲ್ ತಾಲ್ಲೂಕಿನಲ್ಲಿ ೧೯೮೮ನೇ ಏಪ್ರಿಲ್ ತಿಂಗಳಲ್ಲಿ ೧೨ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಒದಗಿಸಲಾಯಿತು. ಈ ತಾಲ್ಲೂಕಿನಲ್ಲಿ ಪ್ರತಿ ವರ್ಷವು ಗುರಿಮೀರಿ ಪ್ರಗತಿ ಸಾಧಿಸಲಾಗುತ್ತಿದೆ: ೧೯೮೬—೮೭ನೇ ಸಾಲಿನಲ್ಲಿ ಗುರಿ ೧೪೦ ಪಂಪ್‌ಸೆಟ್ಟುಗಳಾಗಿದ್ದು ಸಾಧನೆ ೩೧೪ ಆಗಿದೆ. ಇದೇರೀತಿ ೧೯೮೭—೮೮ನೇ ಸಾಲಿನ ಗುರಿ ೨೦೦ ಪಂಪ್‌ಸೆಟ್ಟುಗಳಾಗಿದ್ದು ಸಾಧನೆ ೩೪೫ ಆಗಿದೆ. ಈ ಸಬ್ ಡಿವಿಜನ್‌ಗೆ ಇತ್ತೀಚೆಗೆ೨೦ ಕಿ.ಮೀ ತಂತಿ ಸರಬರಾಜು ಮಾಡಲಾಗಿದೆ. ಮತ್ತು ೧೧.೨೫ ಕೆವಿಎ ಟ್ರಾನ್ಸ್ ಫಾರ್ಮರ್‌ಗಳನ್ನು ಸರಬರಾಜು ಮಾಡಲಾಗಿದೆ.

೧೯೮೮-೮೯ನೇ ಸಾಲಿನ ಗುರಿ ೨೨೫ ಪಂಪ್‌ಸೆಟ್ಟುಗಳು.

ರಾಜ್ಯದಲ್ಲಿ ನೀರಾವರಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ತಿಗಾಗಿ ಹೊಂದಾಯಿಸಲ್ಪಡುವ ಅರ್ಜಿಗಳ ಸಂಖ್ಯೆ ವಾರ್ಷಿಕ ಗುರಿಗಿಂತ ಬಹಳ ಅಧಿಕವಾಗಿದೆ. ಇದು ಗುರಿಯ ಬಿಡುಪರೆ ಪಟ್ಟಿ ನಷ್ಟಾಗಿರುತ್ತದೆ. ಆದ್ದರಿಂದ ಹಲವಾರು ಪ್ರಕರಣಗಳಲ್ಲಿ ಕಾರ್ಯ ನಿಧಾನವಾಗುವುದು ಅನಿವಾರ್ಯ. ಮಂಡಲಿಯ ಈ ಕಾರ್ಯಕ್ಕೆ ಲಭ್ಯವಿರುವ ಹಣಕ್ಕೆ ಅನುಗುಣವಾಗಿ ವಾರ್ಷಿಕ ಗುರಿ ನಿಗದಿ ಮಾಡಿ ಅದಕ್ಕನುಗುಣವಾಗಿ ಸಾಮಗ್ರಿಗಳನ್ನು ಸರಬರಾಜು ಮಾಡುತ್ತದೆ. ನೀರಾವರಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಸರಬರಾಜಿಗೆ ಬೇಕಾಗುವ ಸಾಮಗ್ರಿಗಳನ್ನು ಸರಬರಾಜು ಮಾಡಲು ಕ್ರಮಕೈಗೊಳ್ಳಲಾಗಿದೆ.

ಶ್ರೀ ಸಿ.ಎಂ. ಉದಾಸಿ.—ಮಾನ್ಯ ಅಧ್ಯಕ್ಷರೇ, ಈಗ ೧೬೦ ಪಂಪ್‌ಸೆಟ್‌ಗಳಿಗೆ ಮಂಜೂರಾತಿ ದೊರೆತಿದೆ. ಆದರೆ ವಿದ್ಯುತ್ ಸಂಪರ್ಕವನ್ನು ಕೊಟ್ಟಿಲ್ಲ. ಮಳೆಗಾಲ ಹತ್ತಿರಬರುತ್ತದೆ, ನಿಧಾನ ಮಾಡಿದರೆ ಇನ್ನೂ ಒಂದು ವರ್ಷ ಕಾಯಬೇಕಾಗುತ್ತದೆ, ಡಿಸೆಂಬರ್ ಹೊತ್ತಿಗೆ ವಿದ್ಯುತ್ ಸರಬರಾಜು ಸಿಗುತ್ತದೆ, ಆದ್ದರಿಂದ ಇದೇ ತಿಂಗಳಲ್ಲಿ ವಿದ್ಯುತ್ ಸರಬರಾಜು ಮಾಡಲು ೧೦೦ ಕೆಲೋಮೀಟರ್ ಉದ್ದ ಬರುವಂತಹವಯರು ಮತ್ತು ೨೫ ಕೆವಿಎ ಟ್ರಾನ್ಸ್‌ಫಾರ್ಮರ್‌ಗಳನ್ನು ಅಲ್ಲಿಗೆ ಕಳುಹಿಸುವುದಕ್ಕೆ ಮಾನ್ಯ ಸಚಿವರು ಪ್ರಯತ್ನ ಮಾಡುತ್ತಾರೆಯೇ ಎಂದು ಕೇಳಂತ್ತೇನೆ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಗೆ ಈಗಾಗಲೇ ವಿವರವಾಗಿ ಹೇಳಿದ್ದೇನೆ. ನಾವು ಇಟ್ಟುಕೊಂಡ ಗುರಿಗೆ ಸುಮಾರು ಎರಡುಪಟ್ಟು ಮಿಾರಿ ಸಾಧನೆ ಮಾಡಿದ್ದೇನೆ. ಈಗಲೂ ಕೂಡ ೨೨೫ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡು ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸಲು ಸಿದ್ಧವಾಗಿದ್ದರೂ ಮಳೆ ಶುರುವಾದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಸಂದರ್ಭವಿರುತ್ತದೆ. ಆದರೂ ಆದಷ್ಟು ಜಾಗ್ರತೆಯಾಗಿ ಕೆಲಸಮಾಡಿಮುಗಿಸಿಕೊಡುವುದಕ್ಕೆ ಮಾನ್ಯ ಸದಸ್ಯರು ಹೇಳಿದಹಾಗೆ ೧೦೦ ಕಿಲೋಮೀಟರ್ ಉದ್ದದ ಮತ್ತು ೨೫ ಕೆವಿಎ ಟ್ರಾನ್ಸ್‌ಫಾರ್ಮರ್‌ನ್ನು ಕಳುಹಿಸಲು ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಸಿ.ಎ. ಉದಾಸಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಇಟ್ಟುಕೊಂಡ ಗುರಿಯಬಗ್ಗೆ ಹೇಳಿದರು. ಆದರೆ ಗುರಿ ಏನಾಗಿದೆ ಎಂದರೆ, ಗುರಿಯನ್ನು ಇಟ್ಟುಕೊಳ್ಳುವಾಗಲೇ ಕಡಿಮೆ ಇಟ್ಟುಕೊಂಡು ಎರಡು ಪಟ್ಟು ಹೆಚ್ಚು ಹಾಕಿದ್ದೇವೆಂದು ಹೇಳುವುದಾಗಿದೆ. ಹೋದ ವರ್ಷ ೩೫೦ ಗುರಿ ಇಟ್ಟುಕೊಂಡದ್ದು ಈ ವರ್ಷದ ಗುರಿ ೨೨೫ ಆಗಿರುತ್ತದೆ. ಆದ್ದರಿಂದ ಗುರಿಯನ್ನು ೫೦೦ ಇಟ್ಟುಕೊಂಡು ಕೆಲಸ ಮಾಡಲಂ ಕ್ರಮ ತೆಗೆದುಕೊಳ್ಳುತ್ತಾರೆಯೇ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಇಡೀ ರಾಜ್ಯಕ್ಕೆ ೪೦ ಸಾವಿರ ಪಂಪ್‌ಸೆಟ್ಟುಗಳಿಗೆ ವಿದ್ಯುತ್ತೀಕರಣ ಮಾಡಬೇಕೆಂಬ ಗುರಿ ಇಟ್ಟು ಕೊಂಡಿದ್ದೇವೆ. ಆಯಾ ಸಬ್‌ಡಿವಿಜನ್‌ಗಳಿಗೆ ಬರತಕ್ಕಂಥ ಅರ್ಜಿಗಳು ಆಧಾರದ ಮೇಲೆ ಇದನ್ನು ನಿಗದಿ ಮಾಡಿದ್ದೇವೆ. ಆದರೆ ಏನಾದರೂ ಅವಶ್ಯವಾಗಿ ಬದಲಾವಣೆ ಮಾಡ ಬೇಕಾದ ಸಂದರ್ಭದಲ್ಲಿ ಆ ಗುರಿಯನ್ನು ಹೆಚ್ಚು ಮಾಡುವುದಕ್ಕಿಂತ ಕೆಲಸ ಮಾಡುವುದೇ ಅನುಕೂಲ ವೆಂದು ನನ್ನ ಭಾವನೆ.

ಶ್ರೀ ಪಂಪಾಪತಿ.—ನಾನು ಕಳುಹಿಸಿದ್ದ ಸೂಚನೆಗೆ ಸಂಬಂಧಪಟ್ಟ ಸಚಿವರು ಬಂದಿದ್ದಾರೆ.

ಅಧ್ಯಕ್ಷರು.— ನಾಳೆ ಉತ್ತರಿಸುತ್ತೀರಾ?

ಶ್ರೀ ಎಸ್.ಆರ್. ಬೊಮ್ಮಾಯಿ.—ಇದಕ್ಕೆ ೩-೪ ದಿವಸ ಸಮಯ ಬೇಕು. ಏಕೆಂದರೆ ವಿವರವಾದ ನಥದಿ ಬರಬೇಕಾಗಿದೆ. ಆದ್ದರಿಂದ ಮುಂದಿನವಾರ ತೆಗೆದುಕೊಳ್ಳಿ.

ಶ್ರೀ ಆರ್. ವೆಂಕಟರಾವಪ್ಪಯ್ಯ.—ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ದಯವಿಟ್ಟು ಅದನ್ನು ಮೂವ್ ಮಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಅದನ್ನು ಗಮನ ಸೆಳೆಯುವ ಸೂಚನೆ ಯಾಗಿ ಪರಿವರ್ತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನಾಳೆ ನೋಡೋಣ. ಸ್ವಲ್ಪ ಕೇಳಿ, ನಾಳೆ ಪ್ರಶ್ನೋತ್ತರ ವೇಳೆ ಮುಗಿದ ತಕ್ಷಣ